# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **500(572)** |
| **ಸದಸ್ಯರ ಹೆಸರು** | : | **ಶ್ರೀ ಜಗದೇವ್ ಗುತ್ತೇದಾರ್** |
| **ಉತ್ತರಿಸಬೇಕಾದ ದಿನಾಂಕ** | : | **09.03.2026** |
| **ಉತ್ತರಿಸುವ ಸಚಿವರು** | : | **ಮಾನ್ಯ ಶಾಲಾ ಶಿಕ್ಷಣ ಸಾಕ್ಷರತಾ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರ ನಲಿ-ಕಲಿ ಯೋಜನೆ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳುತ್ತಿದೆಯೇ; ಕ್ರಮ ಕೈಗೊಳ್ಳುತ್ತಿದ್ದರೆ, ಅದಕ್ಕೆ ಕಾರಣಗಳೇನು; | ಸರ್ಕಾರಿ ಪ್ರಾಥಮಿಕ ಶಾಲೆಗಳ ದಾಖಲಾತಿಯಲ್ಲಿ ಗಣನೀಯ ಇಳಿಕೆ ಕಂಡುಬಂದಿರುತ್ತದೆ.<br>ಸುಮಾರು 7000 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದ್ದು, ಸದರಿ ತರಗತಿಗಳಿಗೆ ಏಕತರಗತಿ ಬೋಧನಾ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಸದರಿ ವಿದ್ಯಾರ್ಥಿಗಳು ಏಕ ತರಗತಿ ಪದ್ಧತಿಯಿಂದ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವ ಪ್ರಾಥಮಿಕ ತರಗತಿಗಳಿಗೆ ಸೇರಲು ಹಿಂಜರಿಯುತ್ತಿರುವುದನ್ನು ಗಮನಿಸಲಾಗಿದೆ. ಖಾಸಗಿ ಶಾಲೆಗಳು ಪ್ರಾಥಮಿಕ ತರಗತಿಗಳಿಗೆ ಬಹುವರ್ಗ ಬೋಧನಾ ಪದ್ಧತಿ ಹೊಂದಿರುವುದಿಲ್ಲ.<br><br>ಪ್ರಸ್ತುತ ಸ್ಪರ್ಧಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಬೋಧನಾ ಕಲಿಕಾ ವಿಧಾನವನ್ನು ಪರಿಷ್ಕರಿಸುವ ಅಗತ್ಯತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಮತ್ತು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಏಕರೂಪದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಜಾರಿಗೊಳಿಸಲು 2026-27ನೇ ಸಾಲಿನಿಂದ ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಕೆ.ಪಿ.ಎಸ್, ಪಿ.ಎಂ.ಶ್ರೀ ಶಾಲೆಗಳು ಮತ್ತು ಆಯ್ದ 15 ಜಿಲ್ಲೆಗಳ ಸುಮಾರು 24,300 ಸರ್ಕಾರಿ ಶಾಲೆಗಳಲ್ಲಿ 1 ರಿಂದ 5ನೇ ತರಗತಿವರೆಗೆ ದ್ವಿಭಾಷಾ ಏಕ ತರಗತಿ ಪಠ್ಯ ಪುಸ್ತಕ ಆಧಾರಿತ ಬೋಧನಾ ಕಲಿಕಾ ಪದ್ಧತಿಯನ್ನು ಅಳವಡಿಸಲಾಗುತ್ತಿದೆ. ಈ ಶಾಲೆಗಳನ್ನು ಹೊರತುಪಡಿಸಿ ಉಳಿದ ಸರ್ಕಾರಿ ಶಾಲೆಗಳಲ್ಲಿ 2026-27ನೇ ಸಾಲಿಗೆ ನಲಿ-ಕಲಿ ಕಾರ್ಯಕ್ರಮವನ್ನು ಮುಂದುವರೆಸಲಾಗುತ್ತಿದೆ.<br><br>ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಪರಿಶೀಲಿಸಿದಾಗ, 2024 ರಲ್ಲಿ NCERTಯು ನಡೆಸಿದ PARAKH (Performance Assessment, Review and Analysis of Knowledge for Holistic development) RASHTRIYA SARVEKSHAN ದಲ್ಲಿ ಶೇ.50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ನಿಗದಿಪಡಿಸಿದ ಸಾಮರ್ಥ್ಯಗಳನ್ನು ಗಳಿಸಿರುವುದು ಕಂಡುಬಂದಿರುತ್ತದೆ. ಭಾಷಾ ಕಲಿಕೆಯಲ್ಲಿ ರಾಜ್ಯದ 3ನೇ ತರಗತಿಗಳ ವಿದ್ಯಾರ್ಥಿಗಳು ಶೇ.60 ಸಾಧನೆಯನ್ನು ಮಾಡಿದ್ದು, ರಾಷ್ಟ್ರಮಟ್ಟಕ್ಕಿಂತ ಶೇ.4 ರಷ್ಟು ಕಡಿಮೆ ಸಾಧನೆಯನ್ನು ಮಾಡಿದ್ದು, ಗಣಿತ ವಿಷಯದಲ್ಲಿ ರಾಷ್ಟ್ರಮಟ್ಟಕ್ಕಿಂತ ಶೇ.3 ರಷ್ಟು ಕಡಿಮೆ ಸಾಧನೆಯನ್ನು ಮಾಡಿರುತ್ತಾರೆ. ರಾಜ್ಯದ ವಿದ್ಯಾರ್ಥಿಗಳು 6ನೇ ತರಗತಿಯ ವಿದ್ಯಾರ್ಥಿಗಳು ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ರಾಷ್ಟ್ರ ಮಟ್ಟಕ್ಕಿಂತ ಕ್ರಮವಾಗಿ ಶೇ.2, ಶೇ.1 ಮತ್ತು |

ಶೇ.1 ರಷ್ಟು ಕಡಿಮೆ ಸಾಧನೆ ತೋರಿಸಿರುತ್ತಾರೆ. ಇದರಿಂದ ಕಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವು ಹಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ.

2024ರ ASER (Annual Status of Education Report) ವರದಿಯಲ್ಲಿ ಕರ್ನಾಟಕದ 1ನೇ ತರಗತಿ (ಶೇ.89) ಮತ್ತು 2ನೇ ತರಗತಿಯಲ್ಲಿ (ಶೇ.87.7) ವಿದ್ಯಾರ್ಥಿಗಳು ಬಹುವರ್ಗ ಬೋಧನೆಗೆ ಒಳಪಟ್ಟಿದ್ದು ವಿವಿದ ತರಗತಿಗಳ ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುವುದರಿಂದ ಕಲಿಕಾ ಮಟ್ಟದಲ್ಲಿ ಕುಸಿತವನ್ನು ಕಾಣಬಹುದಾಗಿದೆ ಎಂದು ಅಭಿಪ್ರಾಯಿಸಲಾಗಿದೆ. ಮುಂದುವರೆದು ಸರ್ಕಾರಿ ಶಾಲೆಗಳ 3ನೇ ತರಗತಿಯ ಶೇ.15 ವಿದ್ಯಾರ್ಥಿಗಳು ಮಾತ್ರ 2ನೇ ತರಗತಿ ಮಟ್ಟದ ಪಠ್ಯವನ್ನು ಓದಲು ಶಕ್ತರಾಗಿರುತ್ತಾರೆ. ಶೇ.66 ರಷ್ಟು 3 ಮತ್ತು 5ನೇ ತರಗತಿ ವಿದ್ಯಾರ್ಥಿಗಳು ಸರಳಗಣಿತದ ಸಮಸ್ಯೆಗಳನ್ನು ಬಿಡಿಸಲು ಕಷ್ಟಪಡುವುದನ್ನು ಗಮನಿಸಲಾಗಿದೆ ಎಂದು ಅಭಿಪ್ರಾಯಿಸಲಾಗಿದೆ. 2022ರಲ್ಲಿ ಶೇ.76 ರಷ್ಟು ಇದ್ದ ದಾಖಲಾತಿ ಪ್ರಮಾಣವು 2024ರಲ್ಲಿ ಶೇ.71 ಗೆ ಇಳಿಕೆಯಾಗಿರುವುದನ್ನು ಸಹ ಗಮನಿಸಲಾಗಿದೆ.

2009-10ನೇ ಸಾಲಿನಿಂದ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳ ಕೊರತೆ, ವಲಸೆ ಹೋಗುವ ಕುಟುಂಬಗಳ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಮಧ್ಯಾಂತರದಲ್ಲಿ ತರಗತಿಗಳಿಗೆ ಪ್ರವೇಶ ಪಡೆಯುವ ಸಮಸ್ಯೆಯಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉಂಟಾಗಿದ್ದ ಒತ್ತಡವನ್ನು ಕಡಿಮೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡಲಾಗಿರುತ್ತದೆ. ಇವುಗಳಲ್ಲಿ ಬೋಧನೆಯ ಕಲಿಕಾ ವಿಧಾನವು ಒಂದಾಗಿರುತ್ತದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಕ್ರಮೇಣವಾಗಿ ಬಲಪಡಿಸಲಾಗುತ್ತಿದ್ದು, ಶಿಕ್ಷಕರನ್ನು ಹಾಗೂ ಭೌತಿಕ ಸೌಲಭ್ಯಗಳನ್ನು ಒದಗಿಸಲಾಗಿರುವುದರಿಂದ ಇಂದಿನ ಸನ್ನಿವೇಶಕ್ಕೆ ಬಹುವರ್ಗ ಕಲಿಕಾ ವಿಧಾನವು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿರುತ್ತದೆ.

ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಶೇ.46 ರಿಂದ ಶೇ.38 ಕ್ಕೆ ಕುಸಿದಿದ್ದು, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು ಏಕ ತರಗತಿ ಬೋಧನೆಗೆ ಒಳಪಡಿಸಲು ಇಚ್ಛಿಸುತ್ತಿರುವುದು ದಾಖಲಾತಿ ಪ್ರಮಾಣವು ಇಳಿಕೆಯಾಗುವುದಕ್ಕೆ ಕಾರಣವಾಗಿರುತ್ತದೆ.

ಮೇಲ್ಕಂಡ ಅಂಶಗಳ ಕಾರಣಗಳನ್ನು ಗಣನೆಗೆ ತೆಗೆದುಕೊಂಡು ಕಾಲಕಾಲಕ್ಕೆ ಸರ್ಕಾರವು ಅನೇಕ ಅಗತ್ಯ ಉಪಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಅದರಂತೆ 2026-27ನೇ ಸಾಲಿನಲ್ಲಿ ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 2018-19ನೇ ಸಾಲಿನಿಂದ 2025-26 ನೇ ಸಾಲಿನವರೆಗೆ 1 ರಿಂದ 5ನೇ ತರಗತಿ ದ್ವಿಭಾಷಾ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿರುವ 9522 ಸರ್ಕಾರಿ ಶಾಲೆಗಳಲ್ಲಿ, ಎಲ್ಲಾ ಕೆ.ಪಿ.ಎಸ್. ಶಾಲೆಗಳಲ್ಲಿ, 585 ಪಿಎಂಶ್ರೀ ಶಾಲೆಗಳಲ್ಲಿ ಮತ್ತು ಆಯ್ದ 15 ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಪಠ್ಯಪುಸ್ತಕ ಆಧಾರಿತ ಏಕತರಗತಿ ಬೋಧನಾ ಪದ್ಧತಿಯನ್ನು ಅಳವಡಿಸಕೊಳ್ಳಲಾಗುತ್ತಿದ್ದು, ಉಳಿದ ಶಾಲೆಗಳಲ್ಲಿ

| | | |
|---|---|---|
| | | ನಲಿ ಕಲಿ ಬೋಧನಾ ವಿಧಾನವನ್ನು ಮುಂದುವರೆಸಲಾಗಿದೆ. |
| ಆ | ನಲಿ-ಕಲಿ ಯೋಜನೆಯಿಂದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಕಲಿಕೆಯಲ್ಲಿ ಸುಧಾರಣೆಯಾಗುತ್ತಿರುವುದು ನಿಜವೇ; | ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಪರಿಶೀಲಿಸಿದಾಗ, 2024 ರಲ್ಲಿ NCERTಯು ನಡೆಸಿದ PARAKH(Performance Assessment, Review and Analysis of Knowledge for Holistic development) RASHTRIYA SARVEKSHAN ವರದಿಯಂತೆ ಕಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವು ಹಿರಿಯ ಪ್ರಾಥಮಿಕ ತರಗತಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟಕ್ಕಿಂತ ಕಡಿಮೆ ಇರುವುದು ಕಂಡುಬಂದಿರುತ್ತದೆ.<br><br>2024ರ ASER (Annual Status of Education Report) ವರದಿಯಲ್ಲಿ ಕರ್ನಾಟಕದ 1ನೇ ತರಗತಿ (ಶೇ.89) ಮತ್ತು 2ನೇ ತರಗತಿಯಲ್ಲಿ (ಶೇ.87.7) ವಿದ್ಯಾರ್ಥಿಗಳು ಬಹುವರ್ಗ ಬೋಧನೆಗೆ ಒಳಪಟ್ಟಿದ್ದು, ವಿವಿದ ತರಗತಿಗಳ ವಿದ್ಯಾರ್ಥಿಗಳು ಒಂದೇ ತರಗತಿಯಲ್ಲಿ ವ್ಯಾಸಂಗ ಮಾಡುವುದರಿಂದ ಕಲಿಕಾ ಮಟ್ಟದಲ್ಲಿ ಕುಸಿತವನ್ನು ಕಾಣಬಹುದಾಗಿದೆ ಎಂದು ಅಭಿಪ್ರಾಯಿಸಲಾಗಿದೆ. |
| ಇ | ನಲಿ-ಕಲಿ ಯೋಜನೆ ಸ್ಥಗಿತಗೊಳಿಸಬಾರದು ಎಂಬ ಸಾಧಕ-ಬಾಧಕಗಳ ಬಗ್ಗೆ ಸರ್ಕಾರ ವರದಿಯನ್ನು ತಯಾರಿಸಿದೆಯೇ? | ವಸ್ತುನಿಷ್ಠ ಸೂಚಕಗಳ ಆಧಾರದ ಮೇಲೆ ನಿರ್ಣಯಿಸಿರುವುದರಿಂದ ಇಂತಹ ವರದಿಯನ್ನು ತಯಾರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಇಪಿ 18 ಎಂ.ಸಿ.ಡಿ 2026**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**